ವಿಷಯ:- ಪೌರಾಡಳಿತ ಸಂಸ್ಥೆಗಳಿಗೆ ಅಧಿಕಾರೇತರ ಸದಸ್ಯರ ನಾಮಕರಣ.

1057 (1335) ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಪೌರಾಡಳಿತ ಸಂಸ್ಥೆಗಳಿಗೆ (ಸ್ಥಳೀಯ ಸಂಸ್ಥೆ) ಅಧಿಕಾರೇತರ ಸದಸ್ಯರನ್ನು ನಾಮಕರಣ ಮಾಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ದಿನಗಳಲ್ಲಿ ನಾಮಕರಣ ಕಾರ್ಯವನ್ನು ಪೂರೈಸಲಾಗುವುದು?

ಇ) ನಾಮಕರಣಗೊಂಡ ಸದಸ್ಯರಿಗೆ ಮತದಾನದ ಹಕ್ಕು ಕೊಡಲಾಗುವುದೇ?

ಶ್ರೀ ಮಿರಾಜುದ್ದೀನ್ ಎನ್. ಪಟೇಲ್ (ಪೌರಾಡಳಿತ ರಾಜ್ಯ ಸಚಿವರು):-

ಅ) ಹೌದು.

ಆ) ಆದಷ್ಟು ಶೀಘ್ರ

ಇ) ಇಲ್ಲ.

ವಿಷಯ:- ಮಾಗಡಿ ತಾಲ್ಲೂಕಿನಲ್ಲಿ ಕೈಗಾರಿಕಾ ಶೆಡ್‌ಗಳ ಹಂಚಿಕೆ.

ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ):- ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಕೈಗಾರಿಕಾ ಶೆಡ್‌ಗಳಿಗೆ (ವಿವರ ನೀಡುವುದು) ಎಷ್ಟು ಶೆಡ್‌ಗಳು ಈಗಾಗಲೇ ಕೈಗಾರಿಕೆಗಳಿಗೆ ಹಂಚಿಕೆಯಾಗಿದೆ (ವಿವರ ನೀಡುವುದು). ಹಂಚಿಕೆಯಾಗದಿರುವ ಶೆಡ್‌ಗಳ ಸಂಖ್ಯೆ ಎಷ್ಟು? ಹಂಚಿಗೆಯಾದ ಶೆಡ್‌ಗಳಲ್ಲಿ ಕೈಗಾರಿಕೆಗಳು ನಿರ್ವಹಿಸುತ್ತಿವೆಯೇ? ಇಲ್ಲದಿದ್ದಲ್ಲಿ ಕಾರಣಗಳೇನು?

ಆ) ಕೈಗಾರಿಕಾ ಶೆಡ್‌ಗಳನ್ನು ಹಂಚಲು ಇರುವ ನೀತಿ ನಿಯಮಗಳು ಮಾನದಂಡನೆಗಳೇನು? ಹಂಚಿಕೆಯಾಗದಿರುವ ಶೆಡ್‌ಗಳನ್ನು ಯಾವಾಗ ಹಂಚಲಾಗುವುದು?

ಇ) ಮಾಗಡಿ ತಾಲ್ಲೂಕಿನಲ್ಲಿ ಎಷ್ಟು ಜಮೀನು ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಗೆ ಸೇರಿದೆ? (ವಿವರ ನೀಡುವುದು), ಈ ಜಮೀನನ್ನು ಈಗ ಹಂಚಿಲಾಗುತ್ತಿದೆಯೇ? ಜಮೀನನ್ನು ಹಂಚಿಕೆ ಮಾಡಲು ಇರುವ ನೀತಿ ನಿಯಮ ಮಾನದಂಡಗಳು ಬೆಲೆ ಉದ್ದೇಶದ ಬಗ್ಗೆ ಸರ್ಕಾರದವರು ವಿವರ ನೀಡಬಲ್ಲರೇ?

ಶ್ರೀ ಬಿ.ಎ. ಮೊಹಿದ್ದೀನ್ (ಸಣ್ಣ ಪ್ರಮಾಣದ ಕೈಗಾರಿಕಾ ಸಚಿವರು):-

ಅ) ಒಟ್ಟು 8 ಮಳಿಗೆಗಳಿವೆ. (ಅದರಲ್ಲಿ 4 'ಡಿ' ಮಾದರಿ ಮತ್ತು 4 ಸೂಪರ್‌ಮಿನಿ ಮಾದರಿಗಳು ಇರುತ್ತವೆ).